**ಸಾಕ್ಷಿಯನ್ನು ದಿನಾಂಕಃ 29-12-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲುಃ- ಆರೋಪಿ ಪರ ವಕೀಲರಾದ ಶ್ರೀ ಸಿ. ಜಿ.ಯವರಿಂದಃ**

ಪೋಲೀಸರು ನನ್ನನ್ನು ಸ್ಥಳಕ್ಕೆ ಕರೆದಿರುತ್ತಾರೆ. ಬೆಳಿಗ್ಗೆ 08-15 ರ ಸಮಯಕ್ಕೆ ನಾನು ಸ್ಥಳಕ್ಕೆ ಹೋಗಿದ್ದೇನೆ. ಪಂಚನಾಮೆಗೆ ಚಾಸಾ-1 ರವರು ಮಾಹಿತಿ ನೀಡಿದ್ದಾರೆ. ಅಪಘಾತ ಆದ ಸ್ಥಳದಲ್ಲಿ ಬೈಕ್ ಡ್ಯಾಮೇಜ್ ಆದ ತುಂಡುಗಳು ಇರಲಿಲ್ಲ. ಬೈಕಗಳ ಯಾವ ಕಡೆಗೆ ಡ್ಯಾಮೇಜ್ ಆಗಿದ್ದವೋ ನಾನು ನೋಡಲಿಲ್ಲ. ಅಪಘಾತವಾದ ಸ್ಥಳದಲ್ಲಿ ಪಂಚನಾಮೆ ಮಾಡಿರುತ್ತಾರೆ. ಸದರಿ ಸ್ಥಳವು ನೂರಾನಿ ಕ್ರಾಸನಿಂದ ಸುಮಾರು 100 ಮೀಟರ್ ದೂರದಲ್ಲಿ ಮಾಡಿರುತ್ತಾರೆ. ಸದರಿ ಸ್ಥಳದಲ್ಲಿ ಟಯರ ಮಾರ್ಕಗಳು ಇರಲಿಲ್ಲ. ಪೋಲೀಸರು ಸ್ಥಳದಲ್ಲಿ ಟೇಪನ್ನು ಹಿಡಿದು ಅಳತೆ ಮಾಡಿಕೊಂಡು ಮಾಡಿರುತ್ತಾರೆ. ಚಂದಾವರ-ಅರೆಅಂಗಡಿ ರಸ್ತೆಯ ಎಡ ಅಂಚಿನಿಂದ ಎಷ್ಟು ಅಡಿ ದೂರದಲ್ಲಿ ಅಪಘಾತ ಆಗಿತ್ತು ಅಂತ ನನಗೆ ನೆನಪಿಲ್ಲ. ಪಂಚನಾಮೆಯನ್ನು ಸ್ಥಳದಲ್ಲೇ ಮಾಡಿರುತ್ತಾರೆ. ಪೋಲೀಸ್ ಠಾಣೆಯಲ್ಲಿ ಪಂಚನಾಮೆಗೆ ಸಹಿ ಹಾಕಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆಯ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲದಿದ್ದರೂ ಮೃತನ ಕುಟುಂಬದವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**